## ‘ಚಂದನ’ದಲ್ಲಿ ಮದುವೆ ಸಂಭ್ರಮ

ಗ್ರಾಮೀಣ ಪ್ರದೇಶದ ಮದುವೆ ಯಾವ ರೀತಿ ಇರುತ್ತದೆ ಎಂಬುದನ್ನು ಚಂದನ ವಾಹಿನಿಯು ತನ್ನ ‘ಜಾನಪದ ಸಿರಿ ನವಿಲು’ ಕಾರ್ಯಕ್ರಮದಲ್ಲಿ ಬಿತ್ತರಿಸಿತು. ಅಲಂಕೃತ ಮದುಮಗನನ್ನು ಹಸೆಗೆ ಕರೆತರುವಾಗ ಹಾಡುವ ಜಾನಪದದ ಹಾಡು, ಗಂಡು– ಹೆಣ್ಣಿನ ಕಡೆಯವರ ಸಡಗರ – ಸಂತೋಷ ನೋಡುವುದೇ ಕಣ್ಣಿಗೆ ಹಬ್ಬ. ಸನ್ನಿವೇಶಕ್ಕೆ ಅನುಗುಣವಾದ ಅಪರ್ಣಾರ ನಿರೂಪಣೆ ಕಾರ್ಯಕ್ರಮಕ್ಕೆ ಕಳೆ ನೀಡಿತು. ಚಂದನವಾಹಿನಿಯಿಂದ ಪ್ರಸಾರವಾದ ಈ ಕಾರ್ಯಕ್ರಮಕ್ಕಾಗಿ ವಂದನೆಗಳು.

–ಬೆಳ್ಳಾವೆ ರಮೇಶ್, ಬೆಂಗಳೂರು

## ಸಂದೇಶವೇನು?

‘ಬಿಗ್ ಬಾಸ್’ ಕಾರ್ಯಕ್ರಮದ ಉದ್ದೇಶ ಸರಿಯೇ? ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವ ಕಲಾವಿದರು ವಿವಿಧ ಔದ್ಯೋಗಿಕ ಹಿನ್ನೆಲೆಯಿಂದ, ಅವರವರ ಮನೆಯ ವಾತಾವರಣದಿಂದ ಬಂದಿರುವವರು ಈ ಮನೆಯಲ್ಲಿ ಒಂದುಗೂಡಿರಲು ಸಾಧ್ಯವೇ? ಇಂತಹ ಕಾರ್ಯಕ್ರಮಗಳಿಂದ ಸಮಯ ಹಾಳು. ಮನಸ್ಸಿಗೆ ಕಿರಿಕಿರಿ. ನೋಡುಗರಿಗೆ ಸಮಾಜದ ಓರೆಕೋರೆಗಳನ್ನು ತಿದ್ದುವ ಒಂದಂಶವೂ ಇಲ್ಲ ಎನ್ನುವುದು ನನ್ನ ಅಭಿಮತ. ಇದನ್ನು ಪ್ರಾಯೋಜಕರು, ಪ್ರಸಾರ ಮಾಡುವವರು ಸ್ವಲ್ಪ ಚಿಂತನೆ ನಡೆಸಿದರೆ ಒಳಿತು.

ಸ್ಪರ್ಧಿಗಳ ಪ್ರತಿಷ್ಠೆ, ವೈಯಕ್ತಿಕ ಹಿತಾಸಕ್ತಿಗಳು, ತಿಕ್ಕಲು ಟಾಸ್ಕ್‌ಗಳು, ಗೋಸುಂಬೆತನದ ಪ್ರದರ್ಶನ ಶುರುವಾಗಿದೆ. ಕಳೆದ ಬಾರಿ ಶೃತಿಯವರಿದ್ದ ಜಾಗಕ್ಕೆ ಈ ಬಾರಿ ಮಾಳವಿಕಾ. ಕಿರಿಕ್‌ಗೊಬ್ಬರು ಬೇಕೇ ಬೇಕು. ಕಳೆದ ಬಾರಿ ಹುಚ್ಚ ವೆಂಕಟ್ ದಾಖಲೆ ಮಾಡಿದ್ದರು. ಈ ಬಾರಿ ಅವರ ತಮ್ಮನಂತೆ ಭಾಸವಾಗುವ ಪ್ರಥಮ್‌ರನ್ನು ಎಳೆದು ತಂದಿದ್ದಾರೆ.

–ಸುಂದರ್, ಬೆಂಗಳೂರು, ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಭಾಷೆ ಮೇಲೆ ಹಿಡಿತವಿರಲಿ

ಡ್ರಾಮಾ ಜೂನಿಯರ್ಸ್ ಪ್ರಾರಂಭದಲ್ಲಿ ಈ ಕಾರ್ಯಕ್ರಮ ಹೇಗಿರಬಹುದೆಂಬ ಕುತೂಹಲವಿತ್ತು. ಮುಕ್ತಾಯ ಕಂಡ ಮೇಲೆ ಇದೇ ಕಾರ್ಯಕ್ರಮದ 2ನೇ ಆವೃತ್ತಿ ಮೂಡಿ ಬರಲೆಂದು ಅನಿಸುತ್ತಿದೆ. ಇದೀಗ ‘ಕಾಮಿಡಿ ಕಿಲಾಡಿಗಳು’ ಹೊಸ ರಿಯಾಲಿಟಿ ಶೋ ಆರಂಭವಾಗಿದ್ದು ಸ್ಪರ್ಧಿಗಳು ಉತ್ಸಾಹದಿಂದ ಭಾಗವಹಿಸಿದ್ದಾರೆ.

ಸ್ಪರ್ಧಿಗಳು ತಮ್ಮ ಹಾಸ್ಯ ಪ್ರಸಂಗವನ್ನು ಪ್ರಚುರಪಡಿಸುವಾಗ ಬಳಸುವ ಭಾಷೆಯ ಬಗ್ಗೆ ಎಚ್ಚರವಿರಲಿ. ಮುಜುಗರ ಎನಿಸುವ ಭಾಷೆಯ ಬಳಕೆಗೆ ಸೆನ್ಸಾರ್ ಇರಲಿ.

–ವಿಭಾ ಮುರಳೀಧರ್, ತುಮಕೂರು

### ವಾರದ ಪತ್ರ

## ಬಿಗ್ ಬಾಸು!

‘ಬಿಗ್ ಬಾಸ್’ ಚಂಡಮಾರುತ ಮತ್ತೆ ಅಪ್ಪಳಿಸಿದೆ. ಈ ಸಲವೂ ಅದು ಲಕ್ಷಾಂತರ ಜನರ ಸಮಯ, ಸಮಾಧಾನ, ಆಸಕ್ತಿ, ಆದ್ಯತೆ, ಅಭಿರುಚಿ, ಅರಿವುಗಳನ್ನೆಲ್ಲ ಅಲ್ಲಾಡಿಸುತ್ತ, ನೂರು ದಿನಗಳ ಕಾಲ ಅಲ್ಲೋಲಕಲ್ಲೋಲ ಎಬ್ಬಿಸುತ್ತದೆ. ಕೊನೆಯಲ್ಲಿ ಶೂನ್ಯ ಸಂಪಾದನೆಯ ಉಡುಗೊರೆಯನ್ನು ವೀಕ್ಷಕರಿಗೂ, ಸಂಪತ್ಸಮೃದ್ಧಿಯನ್ನು ಸ್ಪರ್ಧಿಗಳಿಗೂ ನೀಡಿ, ಜೊತೆಗೆ ವಾಹಿನಿಯೊಡೆಯರನ್ನೂ ಸಿರಿಸಂಪದರನ್ನಾಗಿ ಮಾಡಿ ಮಾಯವಾಗುತ್ತದೆ. ಕೃತಿಮ ಸ್ನೇಹ, ಕೃತಕ ನಗು, ನಾಟಕೀಯ ಅಳು, ಜಗಳದ ನಾಟಕ, ಸುಶೀಲ ಉಪದೇಶಗಳು, ಅಶ್ಲೀಲವೆನ್ನಬಹುದಾದ ವೇಷಗಳು, ಪೊಳ್ಳು ಆವೇಶಗಳು, ಟೊಳ್ಳು ಹಠಗಳು ಇತ್ಯಾದಿ. ಅಸಹಜ ನಡೆನುಡಿಗಳನ್ನು ‘ರಿಯಾಲಿಟಿ ಶೋ’ ಹೆಸರಿನಲ್ಲಿ ತೋರಿಸುತ್ತ ಅಮಾಯಕ ವೀಕ್ಷಕರ ಮೆದುಳನ್ನು ಅದು ಗುಡಿಸಿ ಸಾರಿಸುತ್ತಿದೆ. ಇಂತಹ ‘ಬಿಗ್ ಬಾಸ್’ಗಳ ಬದಲು, ನಮ್ಮ ಹಳ್ಳಿಗಳಲ್ಲಿನ ಆಗುಹೋಗುಗಳನ್ನು ಮತ್ತು ಜನಜೀವನವನ್ನು ತೆಳುವಾದೊಂದು ಕಥಾ ಹಂದರದೊಂದಿಗೆ, ನೈಜ ಪರಿಸರ ಮತ್ತು ನೈಜ ವ್ಯಕ್ತಿಗಳೊಡನೆ ಚಿತ್ರೀಕರಿಸಿ ಧಾರಾವಾಹಿಯಾಗಿ ತೋರಿಸಿದರೆ ನಮ್ಮ ವೀಕ್ಷಕರು ನೋಡಿ ಖುಷಿಪಡಬಹುದಲ್ಲವೆ? ‘ತಿಥಿ’ ಚಿತ್ರವನ್ನು ನೋಡಿ ಖುಷಿಪಡಲಿಲ್ಲವೆ?

–ಎಚ್. ಆನಂದರಾಮ ಶಾಸ್ತ್ರಿ, ಬೆಂಗಳೂರು

## ಯಾವುದು ಶಕುನ?

ಈಚೆಗೆ ಧಾರಾವಾಹಿಗಳಲ್ಲಿ ದುಷ್ಟತನದ ಪರಮಾವಧಿಯನ್ನು ಬಹಳವಾಗಿ ಬಿಂಬಿಸುತ್ತಿದ್ದಾರೆ. ಉದಾಹರಣೆಗೆ ಕಲರ್ಸ್ ಕನ್ನಡ ಚಾನೆಲ್‌ನಲ್ಲಿ ‘ಪುಟ್ಟ ಗೌರಿ ಮದುವೆ’ ಯಲ್ಲಿ ತನ್ನ ಮಗಳ ಮದುವೆಗೋಸ್ಕರ ತಂದೆ ಧರ್ಮನು ದೇವರಿಗೆ ಬೆಳಗಿದ ಆರತಿಯನ್ನು ಊದಿ ಶಮನಗೊಳಿಸುವುದು ಮತ್ತು ನವರಾತ್ರಿಯ ಪಟ್ಟದ ಬೊಂಬೆಯನ್ನು ಉರುಳಿಸಿ ಅಪಶಕುನವಾಯಿತು ಎಂದು ಮಗಳನ್ನು ಮಹಿ ಹತ್ತಿರ ಕಳುಹಿಸದಿರುವುದು – ಇವೆಲ್ಲಾ ಧೂರ್ತತನದ ಪರಮಾವಧಿ.

–ಶರ್ಮಿಷ್ಠ ವೇದಗರ್ಭ, ಬೆಂಗಳೂರು

## ಜ್ಞಾನಮುಖಿಯಾಗಲಿ

ಮಕ್ಕಳಿಗೇ ಜ್ಞಾನಾರ್ಜನೆಗಾಗಿ ಯಾವ ವಾಹಿನಿಯಲ್ಲೂ ಕಾರ್ಯಕ್ರಮಗಳಿಲ್ಲ. ದಯವಿಟ್ಟು ವಿಜ್ಞಾನ ವಿಷಯಕ್ಕೆ ಸಂಬಂಧಪಟ್ಟಂತೆ ಕಾರ್ಯಕ್ರಮ, ಕ್ವಿಜ್ ಕಾರ್ಯಕ್ರಮಗಳು, ದೇಶ– ವಿದೇಶಗಳ ಮಾಹಿತಿ ತೋರಿಸುವ ಕಾರ್ಯಕ್ರಮಗಳನ್ನು ತೋರಿಸಿ.

–ಗೀತಾ ವಿ.ಎಚ್. ಚಿಕ್ಕಮಗಳೂರು

## ಬೀಭತ್ಸ ಧಾರಾವಾಹಿ ‘ಅಕ್ಕ’

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ‘ಅಕ್ಕ’ ಧಾರಾವಾಹಿ ಅವಾಸ್ತವಿಕವಾದ ಹಾಗೂ ಅತಿರೇಕವಾದ ಕ್ರೌರ್ಯ, ಹಿಂಸೆ, ಅಮಾನವೀಯತೆ, ದ್ವೇಷ, ಅತಾರ್ಕಿಕ ವರ್ತನೆ, ಅಸಹಜ ಸನ್ನಿವೇಶ ಮುಂತಾದ ಬೀಭತ್ಸ ದೃಶ್ಯಗಳಿಂದ ತುಂಬಿಕೊಂಡಿದೆ. ಅತಿ ಕೆಟ್ಟ ಧಾರಾವಾಹಿ ಎಂದು ತೀರ್ಮಾನಿಸಬಹುದಾದ ಇದರ ನಿರ್ಮಾಪಕ, ಲೇಖಕ, ನಿರ್ದೇಶಕರಿಗೆ ಅತ್ಯಂತ ಕಠಿಣ ಶಿಕ್ಷೆಯನ್ನು ಯಾರಾದರೂ ನೀಡಬಾರದೇ? ಇಂತಹ ಅತಿರೇಕಗಳಿಗೆ ಸೆನ್ಸಾರ್ ವ್ಯವಸ್ಥೆಯನ್ನು ಸರ್ಕಾರ ಮಾಡಬಾರದೇ? ದೂರದಿಂದಲೇ ಜೀವ ಹಿಂಡುತ್ತಿರುವ ಈ ಕಾಣದ ಹಸ್ತಗಳಿಗೆ ಎಂದು ಕೊನೆ? ವಿಕೃತ ಮನಸ್ಸಿನ ವ್ಯಕ್ತಿಗಳು ಇಂತಹ ದುಷ್ಟ ಧಾರಾವಾಹಿಗಳ ರೂಪದಲ್ಲಿ ಜನರ ಮನಸ್ಸಿಗೆ ಚಿತ್ರಹಿಂಸೆ ಕೊಡುತ್ತಿರುವುದಕ್ಕೆ ಪರಿಹಾರವೇ ಇಲ್ಲವೇ? ಜನರ ಮನಸ್ಸುಗಳನ್ನು ಹಿಂಸಿಸುವ ಈ ಧಾರಾವಾಹಿಯನ್ನು ಇನ್ನಾದರೂ ಕಲರ್ಸ್ ವಾಹಿನಿಯವರು ನಿಲ್ಲಿಸಲಿ.

–ಕೆ. ವಿ. ರಾವ್, ಬೆಂಗಳೂರು

## ಚೆನ್ನದಂತಹ ‘ಬಂಗಾರಿ’

ಕಲರ್ಸ್ ಸೂಪರ್ ಚಾನೆಲ್‌ನಲ್ಲಿ ಪ್ರಸಾರವಾಗುವ ‘ಬಂಗಾರಿ’ ಧಾರಾವಾಹಿ ಅದ್ಭುತವಾಗಿ ಮೂಡಿಬರುತ್ತಿದೆ. ಈ ಹಿಂದೆ ಕಲ್ಕಿ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ‘ನೀನಿರಲು ಜೊತೆಯಲ್ಲಿ’ ಧಾರಾವಾಹಿಯ ಪ್ರಮುಖ ಪಾತ್ರಧಾರಿಯೇ ಈ ‘ಬಂಗಾರಿ’ ಧಾರಾವಾಹಿಯಲ್ಲಿ ಕೂಡ ಮುಖ್ಯ ಪಾತ್ರಧಾರಿಯಾಗಿ ಕಾಣಿಸಿಕೊಂಡಿದ್ದು, ಅವರ ನಟನೆ ಇಷ್ಟವಾಗುತ್ತದೆ. ಧಾರಾವಾಹಿ ಇನ್ನಷ್ಟು ಅದ್ಭುತವಾಗಿ ಮೂಡಿಬರಲಿ ಎನ್ನುವುದು ನಮ್ಮ ಆಶಯ.

–ಪವಿತ್ರ, ಉಜಿರೆ

## ಅಸಂಬದ್ಧ ತಿರುವು

ಅಮೃತವರ್ಷಿಣಿ ಧಾರಾವಾಹಿಯ ತಿರುವು ಅಸಂಬದ್ಧವೆನ್ನಿಸುತ್ತದೆ. ಅಮೃತ ಒಂದೇ ಒಂದು ದಿನವೂ ತನ್ನ ಮಗು ಅಮೂಲ್ಯಳನ್ನು ನೆನಪಿಸಿಕೊಳ್ಳುವುದಿಲ್ಲ. ವರ್ಷ ಎರಡೆರಡು ಮಕ್ಕಳನ್ನು ಬಿಟ್ಟು ಬೀದಿ ಬೀದಿ ಅಲೆಯುವುದು, ಅಮೃತ ಬುರ್ಖಾ ಹಾಕಿಕೊಂಡು ಕೋರ್ಟ್‌ಗೆ ಹೋಗುವುದು ಇವೆಲ್ಲ ಸಮಂಜಸವೆನಿಸುತ್ತಿಲ್ಲ. ಧಾರಾವಾಹಿ ಮೊದಲಿದ್ದ ಬಿಗಿ ಕಳೆದುಕೊಂಡಿದೆ. ಬೇಗ ಮುಗಿಸಿ.

–ನಂದಾದೀಪ ಕಳಸಾಪುರ, ಕೊಪ್ಪ